# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 475 |
| ಸದಸ್ಯರ ಹೆಸರು | : | ಶ್ರೀ ಹೆಚ್.ಎಸ್.ಗೋಪಿನಾಥ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 10.07.2023 |
| ಉತ್ತರಿಸುವ ಸಚಿವರು | : | ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ವ್ಯಾಸಂಗ ಮಾಡುತ್ತಿರುವ ಪ್ರಾಥಮಿಕ/ಪ್ರೌಢ ಮತ್ತು ಪದವಿ ಪೂರ್ವ ವಿದ್ಯಾರ್ಥಿ/ವಿದ್ಯಾರ್ಥಿನಿಯರ ಸಂಖ್ಯೆ ಎಷ್ಟು; | ರಾಜ್ಯದಲ್ಲಿನ ಸರ್ಕಾರಿ ಶಾಲಾ/ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಮಕ್ಕಳ ಸಂಖ್ಯೆ ಕೆಳಗಿನಂತಿದೆ. |

| | ಸರ್ಕಾರಿ ಶಾಲೆಗಳು | | |
|---|---|---|---|
| | ಬಾಲಕರು | ಬಾಲಕಿಯರು | ಒಟ್ಟು |
| ಪ್ರಾಥಮಿಕ | 1687992 | 1745160 | 3433152 |
| ಪ್ರೌಢ | 545922 | 566646 | 1112568 |
| ಒಟ್ಟು | 2233914 | 2311806 | 4545720 |
| | ಸರ್ಕಾರಿ ಅನುದಾನಿತ ಶಾಲೆಗಳು | | |
| | ಬಾಲಕರು | ಬಾಲಕಿಯರು | ಒಟ್ಟು |
| ಪ್ರಾಥಮಿಕ | 272256 | 253384 | 525640 |
| ಪ್ರೌಢ | 374632 | 356532 | 731164 |
| ಒಟ್ಟು | 646888 | 609916 | 1256804 |
| | ಖಾಸಗಿ ಶಾಲೆಗಳು | | |
| | ಬಾಲಕರು | ಬಾಲಕಿಯರು | ಒಟ್ಟು |
| ಪ್ರಾಥಮಿಕ | 683845 | 541261 | 1225106 |
| ಪ್ರೌಢ | 1788827 | 1499945 | 3288772 |
| ಒಟ್ಟು | 2472672 | 2041206 | 4513878 |

**ಪದವಿ ಪೂರ್ವ ಕಾಲೇಜು**

| ಬಾಲಕರು | ಬಾಲಕಿಯರು | ಒಟ್ಟು |
|---|---|---|
| 654741 | 703749 | 1358490 |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಆ) | ಈ ವರ್ಷ ಎಷ್ಟು ವಿದ್ಯಾರ್ಥಿಗಳಿಗೆ ಎಷ್ಟು ಜೊತೆ ಸಮವಸ್ತ್ರ ನೀಡಲು ಸರ್ಕಾರ ನಿರ್ಧರಿಸಲಾಗಿದೆ; | 2023-24ನೇ ಸಾಲಿಗೆ 1 ರಿಂದ 10ನೇ ತರಗತಿಯ ಸರ್ಕಾರಿ ಶಾಲೆಗಳ ಒಟ್ಟು 45.45 ಲಕ್ಷ ಮಕ್ಕಳಿಗೆ 2 ಜೊತೆ ಸಮವಸ್ತ್ರ ನೀಡಲು ಸರ್ಕಾರ ನಿರ್ಧರಿಸಿದೆ. |
| ಇ) | ಈ ಸಮವಸ್ತ್ರ ಬಟ್ಟೆಯನ್ನು ಖರೀದಿ ಮಾಡುವಲ್ಲಿ ಕರ್ನಾಟಕ ಕೈಮಗ್ಗ ಹಾಗೂ ವಿದ್ಯುತ್ ಚಾಲಿತ ಮಗ್ಗಗಳ ನೇಕಾರರನ್ನು ಪರಿಗಣಿಸಲಾಗಿದೆಯೇ; | ಹೌದು, 2023-24ನೇ ಸಾಲಿನ ಸಮವಸ್ತ್ರ ಸರಬರಾಜಿಗೆ ಸಂಬಂಧಿಸಿದಂತೆ ಒಟ್ಟು ಬೇಕಾಗುವ 129ಲಕ್ಷ ಮೀಟರ್ ಸಮವಸ್ತ್ರ ಬಟ್ಟೆಯಲ್ಲಿ 27.68ಲಕ್ಷ ಮೀಟರ್ ಸಮವಸ್ತ್ರ ಬಟ್ಟೆಯನ್ನು ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತ ಹಾಗೂ 20.25ಲಕ್ಷ ಮೀಟರ್ |

| | | |
|---|---|---|
| | ಈ ಕುರಿತು ಸರ್ಕಾರದ ನಿಲುವು/ಚಿಂತನೆ ಏನು? | ಸಮವಸ್ತ್ರ ಬಟ್ಟೆಯನ್ನು ಕರ್ನಾಟಕ ರಾಜ್ಯ ಜವಳಿ ಮೂಲ ಸೌಕರ್ಯ ಅಭಿವೃದ್ಧಿ ನಿಗಮ ನಿಯಮಿತ ಸಂಸ್ಥೆಗಳಿಂದ ಖರೀದಿಸಲು ಸರ್ಕಾರ ಅವಕಾಶ ಕಲ್ಪಿಸಲಾಗಿದ್ದು ಅದರಂತೆ ಕಾರ್ಯಾದೇಶ ನೀಡಲಾಗಿರುತ್ತದೆ.<br><br>ಆದರೆ, **ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತ** ಸಂಸ್ಥೆ ಸರಬರಾಜು ಕಾಲಾವಕಾಶ ಮುಕ್ತಾಯಗೊಂಡು 45 ದಿವಸಗಳು ಕಳೆದರೂ ಸರಬರಾಜು ಪೂರ್ಣಗೊಳಿಸದ ಕಾರಣ ಸದರಿ ಸಮವಸ್ತ್ರ ಬಟ್ಟೆಯನ್ನು ಟೆಂಡರ್‌ನಲ್ಲಿ ಆಯ್ಕೆಯಾಗಿದ್ದ ಸಂಸ್ಥೆಗೆ ಹೆಚ್ಚುವರಿಯಾಗಿ ಸರಬರಾಜು ಮಾಡಲು ಆದೇಶ ಮಾಡಲಾಗಿದೆ.<br><br>**ಕರ್ನಾಟಕ ರಾಜ್ಯ ಜವಳಿ ಮೂಲ ಸೌಕರ್ಯ ಅಭಿವೃದ್ಧಿ ನಿಗಮ ನಿಯಮಿತ** ಸಂಸ್ಥೆಗೆ 20.25ಲಕ್ಷ ಮೀಟರ್ ಸಮವಸ್ತ್ರ ಬಟ್ಟೆ ಸರಬರಾಜಿಗೆ ಕಾರ್ಯಾದೇಶ ನೀಡಿ 4 ತಿಂಗಳು ಕಳೆದರೂ ಸರಬರಾಜು ಪ್ರಾರಂಭಿಸದೇ ವಿಳಂಬ ಮಾಡಿದ ಹಿನ್ನಲೆಯಲ್ಲಿ ಸದರಿ ಸಂಸ್ಥೆಗೆ ನೀಡಿದ್ದ ಆದೇಶವನ್ನು ರದ್ದುಮಾಡಿ ಟೆಂಡರ್‌ನಲ್ಲಿ ಆಯ್ಕೆಯಾಗಿದ್ದ ಸಂಸ್ಥೆಗೆ ಹೆಚ್ಚುವರಿಯಾಗಿ ಸರಬರಾಜು ಮಾಡಲು ಆದೇಶ ಮಾಡಲಾಗಿದೆ. |

**ಇಪಿ: 56 ಎಂಪಿಇ 2023**

(ಎಸ್.ಮಧು ಬಂಗಾರಪ್ಪ)
**ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು**